**ಕರ್ನಾಟಕ ಸರ್ಕಾರ**

ಸಂಖ್ಯೆ: ಅಪಜೀ 143 ಇಪಿಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿಗಳ ಕಟ್ಟಡ
ಬೆಂಗಳೂರು ದಿನಾಂಕ: 21.07.2020

**ಸಾರ್ವಜನಿಕ ಪ್ರಕಟಣೆ**

**ವಿಷಯ :** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB), ಬೆಂಗಳೂರು ರ ಅಧ್ಯಕ್ಷರ ಹುದ್ದೆಗೆ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 (1974ರ 6ನೇ) ರ ಅನುಸಾರ ನಾಮ ನಿರ್ದೇಶನಕ್ಕಾಗಿ ಅರ್ಜಿ ಆಹ್ವಾನಿಸುವ ಬಗ್ಗೆ.

- - -

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB), ಬೆಂಗಳೂರು ರ ಅಧ್ಯಕ್ಷರ ಹುದ್ದೆಗೆ ನಾಮ ನಿರ್ದೇಶನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) ಯನ್ನು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರ ಅನುಸಾರ ಸ್ಥಾಪಿಸಲಾಗಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತದೆ. ಅಧ್ಯಕ್ಷರ ಹುದ್ದೆಯು ಪೂರ್ಣಕಾಲಿಕದ್ದಾಗಿರುತ್ತದೆ.

3. ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB), ಬೆಂಗಳೂರು ರವರ ಹುದ್ದೆಯ ನಾಮ ನಿರ್ದೇಶನದ ಷರತ್ತು ಮತ್ತು ನಿಬಂಧನೆಗಳು ಕೆಳಕಂಡಂತಿರುತ್ತವೆ.

| | | |
|---|---|---|
| 1. | ವೇತನ ಮತ್ತಿತರ ಭತ್ಯೆಗಳು | ಅಧ್ಯಕ್ಷರ ವೇತನ ಮತ್ತಿತರ ಭತ್ಯೆಗಳು ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರ ಇವರು ಕಾಲಕಾಲಕ್ಕೆ ಹೊರಡಿಸುವ ಆದೇಶಕ್ಕನುಗುಣವಾಗಿರುತ್ತವೆ. |
| 2. | ನೇಮಕಾತಿ ವಿಧಾನ | ನಾಮ ನಿರ್ದೇಶನ |
| 3. | ಷರತ್ತು ಮತ್ತು ನಿಬಂಧನೆಗಳು | ಅಧ್ಯಕ್ಷರು, ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಮತ್ತು ಅದರ ಅನುಸಾರ ರಚಿಸಲಾದ ನಿಯಮಗಳು, ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಅಪಜೀ 230 ಇಪಿಸಿ 2017, ದಿನಾಂಕ:19.06.2020 ರಲ್ಲಿ ಹೊರಡಿಸಲಾದ ಮಾರ್ಗಸೂಚಿಗಳು ಹಾಗೂ ಅದರ ತಿದ್ದುಪಡಿ ಅಧಿಸೂಚನೆ ದಿನಾಂಕ:21.07.2020ರಂತೆ ಮತ್ತು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಷರತ್ತು ಮತ್ತು ನಿಬಂಧನೆಗಳನ್ವಯ ಕಾರ್ಯ ನಿರ್ವಹಿಸಬೇಕಿರುತ್ತದೆ. |
| 4. | ಅ) ವಿದ್ಯಾರ್ಹತೆ ಮತ್ತು ಅನುಭವ | ಅಂಗೀಕೃತ ವಿಶ್ವವಿದ್ಯಾನಿಲಯಗಳು / ವಿದ್ಯಾ ಸಂಸ್ಥೆಗಳಿಂದ ಪರಿಸರ ವಿಜ್ಞಾನ ಅಥವಾ ಪರಿಸರ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ವಿಜ್ಞಾನ |

| | | |
|---|---|---|
| | | ವಿಷಯದಲ್ಲಿ ಸಮಾನ ಪದವಿ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಜ್ಞಾನ ಮತ್ತು ಅನುಭವ ಅಥವಾ ಪರಿಸರ ಸಂಬಂಧಿ ವಿಷಯ (ಜಲ ಮತ್ತು ವಾಯು ಮಾಲಿನ್ಯ, ತ್ಯಾಜ್ಯ ನಿರ್ವಹಣೆ, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಮತ್ತು ಪರಿಸರ ಆಘಾತ ಅಂದಾಜೀಕರಣ ವಿಷಯಗಳೂ ಸೇರಿದಂತೆ) ಗಳ ಬಗ್ಗೆ ವ್ಯವಹರಿಸುವ ಇಲಾಖೆ ಅಥವಾ ಸಂಸ್ಥೆ ಅಥವಾ ವಿಶ್ವವಿದ್ಯಾನಿಲಯಗಳ ಆಡಳಿತದ ಅಂಗವಾಗಿರುವುದು. |
| | ಆ) ಅಪೇಕ್ಷಣೀಯ ವಿದ್ಯಾರ್ಹತೆ | ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಅಥವಾ ಮೇಲ್ಕಂಡ ವಿಷಯಗಳ ಕುರಿತು ವ್ಯವಹರಿಸುವ ಸಂಸ್ಥೆಗಳಲ್ಲಿನ ಜ್ಞಾನ ಮತ್ತು ಅನುಭವ. |
| 5. | ವಯೋ ಮಿತಿ | ಅಧ್ಯಕ್ಷರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ 62 ವರ್ಷ ಮೀರಿರಬಾರದು. |

4. ನಿಗದಿತ ಅರ್ಜಿಯ ನಮೂನೆ ವಿವರಗಳು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ವೆಬ್‌ಸೈಟ್ https://forest.karnataka.gov.in/ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವೆಬ್‌ಸೈಟ್ http://kspcb.gov.in/ಗಳಲ್ಲಿ ಲಭ್ಯವಿರುತ್ತವೆ.

5. ಆಸಕ್ತ ಮತ್ತು ಅರ್ಹ ಅಭ್ಯಥಿಗಳು ನಿಗದಿತ ನಮೂನೆಯಲ್ಲಿ (4 ಪ್ರತಿಗಳಲ್ಲಿ) ದಿನಾಂಕ: 6ನೇ ಆಗಸ್ಟ 2020 ರಂದು ಸಂಜೆ 5.30 ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಲುಪುವಂತೆ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

ಶ್ರೀ ಮುರಳೀಧರ ಎಸ್. ತಳ್ಳಿಕೇರಿ,<br>ಸರ್ಕಾರದ ಅಧೀನ ಕಾರ್ಯದರ್ಶಿ,<br>ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ<br>(ಜೀವಿಪರಿಸ್ಥಿತಿ ಮತ್ತು ಪರಿಸರ)<br>ಕೊಠಡಿ ಸಂಖ್ಯೆ: 704, 7ನೇ ಮಹಡಿ, 4ನೇ ಗೇಟ್,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001.

(ಮುರಳೀಧರ ಎಸ್. ತಳ್ಳಿಕೇರಿ),<br>ಸರ್ಕಾರದ ಅಧೀನ ಕಾರ್ಯದರ್ಶಿ,<br>ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ<br>(ಜೀವಿಪರಿಸ್ಥಿತಿ ಮತ್ತು ಪರಿಸರ)

ಸ್ಥಳ: ಬೆಂಗಳೂರು<br>ದಿನಾಂಕ: 21.07.2020

**ಅನುಬಂಧ**

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB), ಬೆಂಗಳೂರು**

**ಅಧ್ಯಕ್ಷರ ಹುದ್ದೆಯ ನಾಮ ನಿರ್ದೇಶನಕ್ಕಾಗಿ ನಿಗದಿತ ಅರ್ಜಿ ನಮೂನೆ**

(ನಾಲ್ಕು ಪ್ರತಿಗಳಲ್ಲಿ ಸಲ್ಲಿಸುವುದು. ಯಾವುದೇ ಅಂಶಗಳ ವಿವರ ನಮೂದಿಸಲು ಸ್ಥಳಾವಕಾಶ ಕಡಿಮೆಯಿದ್ದಲ್ಲಿ ದಯವಿಟ್ಟು ಹೆಚ್ಚುವರಿ ದಾಖಲೆ/ ಹಾಳೆಗಳನ್ನು ಲಗತ್ತಿಸುವುದು)

| |
|---|
| **ಸ್ವಯಂ ಧೃಢೀಕರಿಸಿದ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ** |

1 **ಪೂರ್ಣ ಹೆಸರು**

(ಬಿಡಿ ಅಕ್ಷರಗಳಲ್ಲಿ)

2 ಜನ್ಮ ದಿನಾಂಕ:

(ದಿನಾಂಕ/ತಿಂಗಳು/ವರ್ಷ)

3 ವಯಸ್ಸು

(ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ)

(ವರ್ಷ/ತಿಂಗಳು/ದಿನ)

4 ರಾಷ್ಟ್ರೀಯತೆ:

5 ಪತ್ರ ವ್ಯವಹಾರಕ್ಕೆ ಸಂಪೂರ್ಣ ವಿಳಾಸ:

(ಇ-ಮೇಲ್ ವಿಳಾಸ ಸೇರಿದಂತೆ)

6 ಖಾಯಂ ವಿಳಾಸ:

7 ದೂರವಾಣಿ ಸಂಖ್ಯೆ :

(ಕಛೇರಿ/ ಮನೆ / ಮೊಬೈಲ್)

8 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳಿಗೆ ಸೇರಿದವರೇ

9. ವಿದ್ಯಾರ್ಹತೆ:

| ಕ್ರಮ ಸಂಖ್ಯೆ | ವಿಶ್ವವಿದ್ಯಾನಿಲಯ / ಮಂಡಳಿ/ ವಿದ್ಯಾ ಸಂಸ್ಥೆಯ ಹೆಸರು | ಪದವಿ/ ಸಮಾನಾಂತರ ವಿದ್ಯಾರ್ಹತೆ | ಶೇಕಡಾವಾರು ಅಂಕಗಳು / ಪಡೆದ ಉನ್ನತ ಶ್ರೇಣಿ | ಉತ್ತೀರ್ಣಗೊಂಡ ವರ್ಷ | ವಿಷಯ- ಪಿ.ಹೆಚ್.ಡಿ ಪದವಿಯ ಸಂಶೋಧನಾ ವಿಷಯವನ್ನೂ ಒಳಗೊಂಡು |
|---|---|---|---|---|---|
| | | | | | |
| | | | | | |
| | | | | | |

**10.** ಉದ್ಯೋಗದ ದಾಖಲೆ (ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆಯಿಂದ ಪ್ರಾರಂಭಿಸಿ ಕಾಲಾನುಕ್ರಮದಲ್ಲಿ):

| ಕ್ರಮ ಸಂಖ್ಯೆ | ಉದ್ಯೋಗದಾತರ ಹೆಸರು ಮತ್ತು ವಿಳಾಸ | ಪದನಾಮ/ ವೇತನ ಶ್ರೇಣಿ/ ಖಾಯಂ ಹುದ್ದೆಯೇ ಅಥವಾ ನಿಯೋಜನೆಯೇ | ಸೇವೆಯ ಅವಧಿ | | ಕರ್ತವ್ಯದ ಸ್ವರೂಪ |
|---|---|---|---|---|---|
| | | | ಯಿಂದ | ವರೆಗೆ | |
| | | | | | |
| | | | | | |
| | | | | | |

11. ಪರಿಸರ ಸಂರಕ್ಷಣೆಯ ಕುರಿತು ಹೊಂದಿರುವ ವಿಶೇಷ ಜ್ಞಾನ ಹಾಗೂ ಗಳಿಸಿದ ಪ್ರಾಯೋಗಿಕ ಅನುಭವದ ವಿವರ (ಕೈಗಾರಿಕೆಗಳಿಂದಾಗುವ ಮಾಲಿನ್ಯ ಉಪಶಮನ, ಜಲ ಸಂಸ್ಕರಣೆ ಅಥವಾ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳ ಬಗೆಗಿನ ಇತ್ತೀಚಿನ ಬೆಳವಣಿಗೆಗಳ ಜ್ಞಾನ ಒಳಗೊಂಡಂತೆ) ಅಂತಹ ಸಂಸ್ಥೆಗಳಲ್ಲಿನ ಅನುಭವದ ಅವಧಿಯೂ ಸೇರಿದಂತೆ:

12. ಪರಿಸರ ಕಾಳಜಿ ಕುರಿತು ಸೇವಾ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ ಏರ್ಪಡಿಸುವ / ಆಯೋಜಿಸುವ ಬಗ್ಗೆ ಅನುಭವ:

13. ವಿಶೇಷ ಆಸಕ್ತಿಯ ಕ್ಷೇತ್ರ:

14. ಪ್ರಶಸ್ತಿ / ಮನ್ನಣೆ ದೊರೆತಿದ್ದಲ್ಲಿ :

15. ಮತ್ತಾವುದೇ ಸಂಬಂಧಪಟ್ಟ ಮಾಹಿತಿ:

## ಘೋಷಣೆ / ದೃಢೀಕರಣ

ಈ ಮೇಲೆ ನಮೂದಿಸಿರುವ ಮಾಹಿತಿಗಳು ನನ್ನ ತಿಳುವಳಿಕೆ ಮತ್ತು ನಂಬಿಕೆಯಂತೆ ಸತ್ಯವಾಗಿರುತ್ತವೆ ಮತ್ತು ಪರಿಪೂರ್ಣವಾಗಿರುತ್ತವೆ ಹಾಗೂ ಯಾವುದೇ ಮಾಹಿತಿಗಳನ್ನು ಮರೆ ಮಾಚಿರುವುದಿಲ್ಲ ಎಂಬುದನ್ನು ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ನಾನು ನೀಡಿರುವ ಯಾವುದೇ ವಾಸ್ತವ ಅಂಶಗಳು ಸತ್ಯಕ್ಕೆ ದೂರವಾಗಿದ್ದಲ್ಲಿ ಅಥವಾ ಮರೆಮಾಚಿರುವುದು / ವಿರೂಪಗೊಳಿಸಿರುವುದು ಕಂಡುಬಂದಲ್ಲಿ ನನ್ನ ನೇಮಕಾತಿ ಆದೇಶವನ್ನು ಯಾವುದೇ ಸೂಚನೆ / ಕಾರಣ ನೀಡದೇ ರದ್ದುಗೊಳಿಸಬಹುದಾಗಿರುತ್ತದೆ.

(ಅಭ್ಯರ್ಥಿಯ ಸಹಿ)

ದಿನಾಂಕ:

ಸ್ಥಳ: